# ಸಿದ್ಧ ಗುರುಮಾರ್ಗ

ಭಾರತದಲ್ಲಿ ಎರಡು ಗುರು ಪರಂಪರೆಗಳಿವೆ. ಒಂದು: ‘ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ’ ಎನ್ನುವ ಪರಂಪರೆ. ಇದು ಅಂತಿಮವಾಗಿ ಶಿಷ್ಯನ ಶರಣಾಗತಿಯನ್ನು ಬೇಡುವಂಥದ್ದು. ನನ್ನ ಆಜ್ಞೆಯನ್ನು ಮರು ಪ್ರಶ್ನಿಸದೆ ಪಾಲಿಸು ಎನ್ನುವ ಚರಮ ವಾಕ್ಯ ಅದರ ಗುರಿ. ಈ ಗುರು ಪರಂಪರೆಯಲ್ಲಿ ಸ್ತ್ರೀಯರು, ಶೂದ್ರ ಮತ್ತು ಅತಿ ತಳದಲ್ಲಿರುವ ಪ್ರತಿಭೆಗಳನ್ನು ಜ್ಞಾನ ಸಾಧನೆಯಲ್ಲಿ ಸೇರಿಸಿಕೊಳ್ಳುವುದಿಲ್ಲ. ವರ್ಣಾಶ್ರಮ ಪದ್ಧತಿಯನ್ನು ಉಲ್ಲಂಘಿಸಿ ‘ಗುರುಕುಲ’ಕ್ಕೆ ಪ್ರವೇಶಿಸಿದ ಏಕಲವ್ಯ ಕೊನೆಗೆ ಗುರು ಕೇಳಿದನೆಂದು ತನ್ನ ಹೆಬ್ಬೆರಳನ್ನೇ ಕತ್ತರಿಸಿಕೊಟ್ಟು ತನ್ನ ಬದುಕನ್ನು ಕೊನೆಗಾಣಿಸಿಕೊಂಡ. ಅವನ ಬಿಲ್ವಿದ್ಯೆಯಲ್ಲಿ ದ್ರೋಣಾಚಾರ್ಯರ ನೇರ ಪಾತ್ರ ಇಲ್ಲದಿದ್ದರೂ ಏಕಲವ್ಯನ ಪ್ರತಿಭೆಯನ್ನು ಸಹಿಸಲಾರದ ಆಗಿನ ಪ್ರಭುತ್ವ ಮತ್ತು ಆಚಾರ್ಯ ದ್ರೋಣರ ಮನಸ್ಸು ಕೊನೆಗೆ ಅವನನ್ನೇ ಬಲಿ ಪಡೆಯಿತು. ಕರ್ಣನೂ ಹೀಗೆಯೇ ಗುರುವಿನ ಶಾಪಕ್ಕೆ ತುತ್ತಾಗಿ ತನ್ನ ಜೀವವನ್ನೇ ಬಲಿಯಾಗಿಸಿಕೊಂಡ. ಭಾರತದ ಜಾತಿ ಪದ್ಧತಿ ಶೂದ್ರರು ಮತ್ತು ಕೆಳಹಂತದ ಪ್ರತಿಭೆಗಳನ್ನು ಹೇಗೆ ನಡೆಸಿಕೊಳ್ಳುತ್ತದೆ ಎನ್ನುವುದಕ್ಕೆ ಇರುವ ಕಣ್ಣಮುಂದಿನ ಉದಾಹರಣೆ ಇದು.

ಅಸ್ಪೃಶ್ಯತೆಯ ಆಚರಣೆಗೆ ಒಳಗಾದ ಗಂಗಮ್ಮ ಎನ್ನುವ ಮಹಿಳೆಯೊಬ್ಬಳು ಹೇಳುವ ಅನುಭವ ಕಥನವೊಂದು ಹೀಗಿದೆ: ‘ನಮ್ಮ ಕರೆಮಾರನಹಳ್ಳಿಯಲ್ಲಿ ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದೆ. ಜಾತಿ–ಭೇದ ಶಾನೆ ಇತ್ತು. ನಾನು ಓದುತ್ತಿದ್ದಾಗ ಒಬ್ಬ ಮೇಷ್ಟ್ರು ಇದ್ದರು. ಅವರ ಹೆಸರು ನನಗೆ ಗೊತ್ತಿಲ್ಲ! ಅವರು ಶಾಲೆಯಲ್ಲಿ ಜಾತಿ–ಭೇದ ಮಾಡುತ್ತಿದ್ದರು. ನಮ್ಮ ಹೊಲೆ–ಮಾದಿಗರ ಹುಡುಗರನ್ನು ಶಾಲೆಯೊಳಗೆ ಬಿಟ್ಟುಕೊಳ್ಳದೆ ಶಾಲೆಯ ಹೊಸಲಿಂದಾಚೆಗೆ ಕೂರಿಸುತ್ತಿದ್ದರು. ಬಿಸಿಲು–ಮಳೆ–ಚಳಿ ಇದ್ದರೂ ನಾವೆಲ್ಲ ಹೊರಗೇ ಕುಳಿತು ಪಾಠ ಕೇಳಬೇಕಾಗಿತ್ತು. ನಮ್ಮನ್ನು ಹೊಡೆಯುವ ಸಂದರ್ಭದಲ್ಲೂ ಮಡಿ–ಮೈಲಿಗೆ ಅನುಸರಿಸುತ್ತಿದ್ದರು. ಒಂದು ಭಾರಿ ಉದ್ದನೆಯ ಕೋಲನ್ನು ಹಿಡಿದು, ತಮ್ಮ ಕಚ್ಚೆ ಪಂಚೆಯನ್ನು ನಮಗೆ ಸೋಕದಂತೆ ಮುದುಡಿಕೊಂಡು ನಮ್ಮನ್ನು ಹೊಡೆಯುತ್ತಿದ್ದರು. ಇದಿಷ್ಟೇ ಅಲ್ಲದೆ, ಆಟ ಆಡಿಸುವುದರಲ್ಲೂ ತರತಮ ಮಾಡುತ್ತಿದ್ದರು. ನಾವು ಬೇರೆ ಜಾತಿಯ ಹುಡುಗರ ಜೊತೆ ಸೇರಿ ಆಟ ಆಡುವಂತಿರಲಿಲ್ಲ! ನಮ್ಮ ಹಟ್ಟಿಯ ಹುಡುಗರ ಜೊತೆ ಪ್ರತ್ಯೇಕವಾಗಿಯೇ ಆಡಬೇಕಾಗಿತ್ತು! ಇವರು ಹೀಗೆ ನಮ್ಮನ್ನೆಲ್ಲಾ ಪ್ರತ್ಯೇಕವಾಗಿ ಇಡುವುದನ್ನು ನೋಡಿ, ನಮ್ಮ ಹಳ್ಳಿಯವರೆಲ್ಲಾ ‘ಹೀಗೆಲ್ಲಾ ಮಾಡಬೇಡಿ’ ಎಂದು ಹೇಳುತ್ತಿದ್ದರು. ಆದರೂ ಮೇಷ್ಟ್ರು ಊರಿನವರ ಮಾತನ್ನು ಕಿವಿ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ನಮಗೂ ಇದೆಲ್ಲಾ ‘ಸರಿ’ ಎನಿಸುತ್ತಿರಲಿಲ್ಲ, ಆದರೂ ಗಟ್ಟಿಯಾಗಿ ಕೇಳಲು ಧೈರ್ಯ ಇರಲಿಲ್ಲವಾದ್ದರಿಂದ ಸುಮ್ಮನಿದ್ದೆವು. ಮುಂದೆ ನಮ್ಮ ಜಾತಿಯವರಾದ ಸಿದ್ದಪ್ಪ ಅವರು ಮೇಷ್ಟ್ರಾಗಿ ನಮ್ಮ ಊರಿಗೆ ಬಂದ ಮೇಲೆ ಇವೆಲ್ಲಾ ನಿಂತಿತು.

ಎರಡನೆಯದು ಸಿದ್ಧ ಗುರು ಪರಂಪರೆ: ಇದು ಭಾರತೀಯ ಸಮಾಜ ಪಾಲಿಸುತ್ತಿರುವ ವರ್ಣಾಶ್ರಮ ಸಂಪ್ರದಾಯಗಳನ್ನು ನಿರಾಕರಿಸಿ, ಕಟ್ಟಕಡೆಯವರನ್ನೂ ಒಳಗೊಳ್ಳುವ ಗುರು ಪರಂಪರೆ. ವಿಧಿ ನಿಷೇಧಗಳಿಲ್ಲದ ಈ ಪರಂಪರೆಯಲ್ಲಿ ಶಿಷ್ಯ ಗುರುವಿನ ಗುಲಾಮನಲ್ಲ! ಬದಲಿಗೆ ಈ ಪರಂಪರೆ ಗುರುವಿನಂತೆ ಶಿಷ್ಯನನ್ನೂ ಸಾಧನೆಯ ಉನ್ನತಿಗೇರಿಸುತ್ತದೆ. ಇದು ಹೊರಗಣ್ಣಿಗೆ ಸಹಜವಾದ ಸಂಗತಿಯಂತೆ ಕಂಡರೂ ಒಳಗಣ್ಣಿಗೆ ಶಿಲ್ಪವನ್ನು ಕಡೆಯುವ ಶಾಲೆಯಂತೆ ಇರುತ್ತದೆ. ಈ ಪರಂಪರೆ ಕೇವಲ ಪಠ್ಯ ಜ್ಞಾನವನ್ನು ಮಾತ್ರ ಕಲಿಸುವುದಿಲ್ಲ! ಜೊತೆಗೆ ಕುಶಲ ಕಸುಬು, ಬೆವರು, ಶ್ರಮದ ಮೂಲಕವೂ ‘ಅರಿವು’ ಮೂಡಿಸುತ್ತಿರುತ್ತದೆ. ಸರಹಪಾದ ಎನ್ನುವ ಬೌದ್ಧ ಮಹಾಸಿದ್ಧ ಬಾಣ ಮಾಡುವ ಶಬರ ಕನ್ಯೆಯನ್ನು ಮದುವೆಯಾಗಿ ಅವಳನ್ನೇ ತನ್ನ ಗುರು ಎಂದು ಸ್ವೀಕರಿಸಿದ. ಕನ್ನಡದ ವಚನಕಾರರು ಮತ್ತು ತತ್ತ್ವಸಾಧಕ ಪರಂಪರೆಗಳಲ್ಲೂ ತಮ್ಮ ತಮ್ಮ ಕಾಯಕಗಳನ್ನೇ ಸಾಧನೆಗೆ ಪಥವಾಗಿಸಿಕೊಂಡವರಿದ್ದಾರೆ. ಈ ಗುರು ಮಾರ್ಗ ವ್ಯಕ್ತಿಗತ ಬಿಡುಗಡೆಯ ಬದಲಾಗಿ ಸಾಮೂಹಿಕ ಬಿಡುಗಡೆಯ ದಾರಿಯನ್ನು ತೋರಿಸುವಂಥದ್ದು. ಶರಣಾಗತಿಯನ್ನು ಬಯಸದ ಗುರು ಕರುಣೆಗೊಲಿವ ಮಾರ್ಗ ಇದು. ಸರಳ ಜೀವನ, ಯಾರಿಗೂ ಕೇಡು ಬಯಸದಿರುವುದು, ಅಧಿಕಾರ ಮತ್ತು ಕೀರ್ತಿಯ ಚಪಲದಿಂದ ದೂರ ಇರುವುದು, ತಮ್ಮನ್ನು ತಾವು ‘ಗುರು’ ಎಂದು ಕರೆದುಕೊಳ್ಳದಿರುವುದು ಈ ಮಾರ್ಗದ ಮುಖ್ಯ ಚಹರೆಗಳು. ಹೊರಮೈಗೆ ಕಾವಿಯನ್ನು ಹೊದ್ದು, ಒಳಗೆ ಸಂಪತ್ತು, ಕೀರ್ತಿಗಾಗಿ ಜೀವಿಸುವ ‘ಕಪಟ ಯೋಗಿ’ಗಳನ್ನು ‘ಅವರು ತನುವಿನಿಂದ ಯೋಗಿಗಳು, ನಾವು ಮನಸ್ಸಿನಿಂದ ಯೋಗಿಗಳು’ ಎಂದು ನಿರ್ಲಕ್ಷಿಸುತ್ತಾರೆ.

ಸಿದ್ಧ ಪರಂಪರೆಯಲ್ಲಿ ದೇವರಿಗಿಂತ ಗುರುವಿನ ಸ್ಥಾನವೇ ಉನ್ನತವಾದದ್ದು. ವಚನ ಪರಂಪರೆ ‘ದೇವನೂ ಗುರು’ ಎಂದು ಹೇಳುತ್ತದೆ. ಇನ್ನು ತತ್ತ್ವಪದಕಾರರ ಪರಂಪರೆಯಂತೂ ಅಪ್ಪಟ ಗುರು ಮಾರ್ಗದ್ದು. ಇಲ್ಲಿ ಗುರುವಿನ ಮುಂದೆ ದೇವರೂ ಹಿಂದೆ ಸರಿಯಬೇಕು. ಕೇವಲ ಗುರುವಿನ ಗದ್ದುಗೆಗೆ ಮಾತ್ರ ಶಿಷ್ಯರ ನಿಷ್ಠೆ. ಇವರು ತಮ್ಮನ್ನು ‘ಗುರುಮಕ್ಕಳು’ ಎಂದು ಕರೆದುಕೊಳ್ಳುತ್ತಾರೆ. ‘ಯಾರಿಂದ ಬೆಳಕು ಕಾಣುತ್ತದೊ ಅವನೇ ಗುರು’ ಎಂದು ಹೇಳುತ್ತಾರೆ. ಇದನ್ನೇ ‘ಗುರು ಗೋವಿಂದ ಇಬ್ಬರೂ ಒಟ್ಟಿಗೆ ಎದುರಿಗೆ ನಿಂತಿದ್ದಾರೆ. ಇವರಿಬ್ಬರಲ್ಲಿ ನಾನು ಯಾರ ಪಾದಕ್ಕೆ ಮೊದಲು ಎರಗಲಿ? ಹೇ ಗುರು, ನಿನ್ನ ಮೇಲೆಯೇ ನನ್ನನ್ನು ನಿವಾಳಿಸಿ ಚೆಲ್ಲುತ್ತೇನೆ. ನಿನಗೆ ನಾನು ಶರಣು ಹೋಗುತ್ತೇನೆ. ಏಕೆಂದರೆ ನೀನೇ ನನಗೆ ಗೋವಿಂದನನ್ನು ತೋರಿಸಿದೆ’ ಎಂದು ಕಬೀರನ ದೋಹೆ ಹೇಳುವುದರ ಮೂಲಕ, ದೈವ ಕೃಪೆಗಿಂತ ಗುರು ಕೃಪೆಯೇ ಉನ್ನತವಾದದ್ದು ಎಂಬುದನ್ನು ತಿಳುವಿಗೆ ತರುತ್ತದೆ. ಲಿಂಗ ಮತ್ತು ಜಾತಿ ತಾರತಮ್ಯಗಳ ವಿರುದ್ಧ ಪ್ರಖರವಾಗಿ ಸಿಡಿಯುವ ಈ ಪರಂಪರೆಗಳು ಶ್ರೇಷ್ಠ–ಕನಿಷ್ಠ, ಮಡಿ–ಮೈಲಿಗೆ, ಮೇಲು–ಕೀಳು ಮುಂತಾದ ರೂಢಿಗತ ನಂಬಿಕೆಗಳನ್ನು ತಿರಸ್ಕರಿಸುತ್ತವೆ.

ಈ ಪರಂಪರೆಯಲ್ಲಿ ಗುರು ಶಿಷ್ಯನ ಮನಸ್ಸನ್ನು ಸಾಣೆಹಿಡಿಯುವ ಸಾಣೆಕಲ್ಲಿನವನಂತೆ. ಮನಸ್ಸು ಕಿಲುಬು ಕಟ್ಟಿದಾಗ ಅದಕ್ಕೆ ಸಾಣೆ ಹಿಡಿದು ಹೊಳೆಯುವಂತೆ ಮಾಡುವುದು ಗುರುವಿನ ಕೆಲಸ. ಈ ಮಾರ್ಗದಲ್ಲಿ ಗುರು ದಾರಿಯನ್ನು ತೋರುವವನೇ ಹೊರತು, ನಿಮ್ಮನ್ನು ಕೈಹಿಡಿದು ಆ ದಾರಿಯಲ್ಲಿ ಕರೆದುಕೊಂಡು ಹೋಗುವವನಲ್ಲ! ಅಂತಿಮವಾಗಿ ನಮ್ಮ ಬಟ್ಟೆಯಲ್ಲಿ ನಾವೇ ನಡೆಯಬೇಕು. ವಚನ ವಾಙ್ಮಯ ಇದನ್ನೇ ‘ಅರಿವೇ ಗುರು’ ಎನ್ನುತ್ತದೆ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಐಶ್ವರ್ಯಕ್ಕಿಂತ ಹೆಚ್ಚಿನ ಮೌಲ್ಯಗಳು ಜೀವನದಲ್ಲಿವೆ.

  —ರವೀಂದ್ರನಾಥ ಟ್ಯಾಗೋರ್
- ಕೋಪವೆಂಬುದು ಅಲ್ಪಕಾಲದ ಹುಚ್ಚು.

  —ಹೊರೇಸ್
- ದಾನದಿಂದ ತ್ಯಾಗದಿಂದ ದೊರಕುವ ಆನಂದವು ಅವರ್ಣನೀಯ. ಅದನ್ನು ನಮ್ಮಿಂದ ಯಾರೂ ಕಿತ್ತುಕೊಳ್ಳಲಾರರು.

  —ಸ್ವಾಮಿ ವಿವೇಕಾನಂದ
- ಸಮಯದ ಮಹತ್ವ ತಿಳಿದ ಮನುಷ್ಯನಿಗೆ ಬದುಕಿನ ಮಹತ್ವ ತಿಳಿದಿರುತ್ತದೆ.

  —ಟಾಕ್ಟಸ್
- ಒಳ್ಳೆಯ ಜೀವನ ಅಂದರೆ ಮತ್ತೆ ಅಪೇಕ್ಷಿಸುವ ರೀತಿಯಲ್ಲಿ ಎಲ್ಲರಿಗೂ ಬೇಕಾದವರಾಗಿ ಬಾಳುವುದು.

  —ನೀಟ್ಷೆ
- ಯಾವುದೋ ಆಂತರ್ಯವಾದ ಕಾರಣಗಳು ಮಾತ್ರ ಪರಸ್ಪರ ಒಟ್ಟುಗೂಡಿಸುತ್ತವೆ. ಪ್ರೀತಿ ಬಾಹ್ಯ ಕಾರಣಗಳನ್ನು ಅವಲಂಬಿಸಿ ಬರುವುದಿಲ್ಲ.

  —ಭವಭೂತಿ
- ಕೂಡಿಡುವುದನ್ನು ಬಿಡಬೇಕು ಅಥವಾ ಅದರಿಂದ ಉಂಟಾಗುವ ಕಷ್ಟಗಳನ್ನು ಸಹಿಸಬೇಕು.

  —ಸೋಮದೇವ